ಮಾಡಿದರು. ಮಗನಲಾಲ್‌ಗೆ ಮೊದಲು ಹೇಳುವುದೇ ಸರಿಯೆಂದು ತೀರ್ಮಾನಿಸಿ ಆತನ ಬಳಿಗೆ ಬಂದರು.

'ಇದು ಸರಿಯಾ?' ಎಂದು ಪ್ರಶ್ನಿಸಿದರು.

'ಯಾವುದು?' ಎಂದು ಮಗನ್ ಲಾಲ್ ಕೇಳಿದ.

ಅವರು ಪರಸ್ಪರ ಮುಖ ನೋಡಿಕೊಂಡು ಯಾರು ಹೇಳುವುದೆಂದು ಸ್ವಲ್ಪ ಹಿಂದೇಟು ಹಾಕಿದರು. ಆನಂತರ ಮೊದಲು ಮಾತಾಡಿದವನೇ ಹೇಳಿದ:

'ಅಲ್ಲ. ನಮ್ಗೆಲ್ಲ ಕಾಫಿ ಟೀ ಕುಡಿಯೋಂಗಿಲ್ಲ ಅಂತ ನಿಯಮ ಮಾಡಿದ್ದೀರಿ...'

'ಹೌದು; ನಾನೂ ಕುಡಿಯಲ್ಲ. ಇಲ್ಲಿ ಯಾರೂ ಕುಡಿಯಲ್ಲ' ಎಂದ ಮಗನ್‌ಲಾಲ್.

'ಕಸ್ತೂರ್‌ಬಾ?'

'ಅವ್ರೂ ಕುಡಿಯಲ್ಲ.'

'ಕುಡೀತಾರೆ.'

'ಸುಮ್ನೆ ಇಲ್ಲಸಲ್ಲದ್ ಹೇಳ್‌ಬೇಡಿ.'

'ಕಣ್ಣಾರೆ ಕಂಡದ್ ಹೇಳ್ತಿದ್ದೀವಿ. ಇವತ್ತೇ ನೋಡಿದ್ವಿ. ಹಿಂದೇನೂ ಒಂದೆರಡ್ ಸಾರಿ ನೋಡಿದ್ದೀವಿ.'

'ಈಗೇನ್ ಮಾಡ್ ಬೇಕ್ರಪ್ಪ.'

'ಎಲ್ರಿಗೂ ಒಂದೇ ನ್ಯಾಯ ಇರ್ಬೇಕು. ಕಸ್ತೂರಮ್ಮೋರ್ಗೆ ನೀವ್ ಹೇಳ್‌ಬೇಕು.'

'ಅವ್ರ್‌ಗೆ ನಾನ್ ಹೇಳೋಕಾಗುತ್ತ? ಅದೇನಿದ್ರು ಬಾಪು ಅವ್ರಿಗೇ ಸರಿ' ಎಂದು ಮಗನ್‌ಲಾಲ್ ಕೈತೊಳೆದುಕೊಂಡ. ಆದರೆ ಈ ಆಶ್ರಮವಾಸಿಗಳ ಸಣ್ಣಗುಂಪು ಸುಮ್ಮನಿರಲಿಲ್ಲ. ಬಾಪುವಿನ ಬಳಿಗೇ ಹೋಯಿತು.

ಗಾಂಧಿ ಮತ್ತು ಮಹದೇವ ದೇಸಾಯಿ ಏನೋ ಚರ್ಚಿಸುತ್ತ ಕೂತಿದ್ದರು. ಗಾಂಧಿ ಹೇಳುವುದನ್ನು ಒಮ್ಮೊಮ್ಮೆ ಮಹದೇವ ದೇಸಾಯಿ ಗುರುತು ಹಾಕಿಕೊಳ್ಳುತ್ತಿದ್ದರು. ಆಶ್ರಮವಾಸಿ ಗುಂಪು ಬಂದು ಗಾಂಧಿ ಎದುರು ನಿಂತಾಗ ಗಾಂಧಿಯವರಿಗೆ ಸ್ವಲ್ಪ ಇರಿಸುಮುರಿಸೇ ಆಯಿತು. ಯಾಕೆಂದರೆ ಅವರು ತಮ್ಮ ಕಾರ್ಯಕ್ರಮಗಳ ರೂಪುರೇಷೆ ಚರ್ಚಿಸುತ್ತಿದ್ದರು. ಆದರೂ 'ಏನ್ ಬಂದಿದ್ದು' ಎಂದು ಕೇಳಿದರು. ಆ ಗುಂಪು ಮಗನ್‌ಲಾಲ್‌ಗೆ ಹೇಳಿದ್ದನ್ನೆಲ್ಲ ಸ್ವಲ್ಪ ವಿನಯಪೂರ್ವಕ ಶೈಲಿಯಲ್ಲಿ ಹೇಳಿತು. ಒಬ್ಬನಂತೂ ಕಡೆಯಲ್ಲಿ 'ನಿಮ್ ಪತ್ನಿಗೊಂದು ನ್ಯಾಯ, ನಮಗೊಂದು ನ್ಯಾಯ, ಇರಬಾರದಲ್ವ ಬಾಪೂಜಿ?' ಎಂದು ಕೇಳಿಯೇ ಬಿಟ್ಟ.

ಗಾಂಧಿಗೆ ತುಂಬಾ ಕಸಿವಿಸಿಯಾಯಿತು. ಆಶ್ರಮವಾಸಿಗಳು ನ್ಯಾಯದ ಪ್ರಶ್ನೆ ಕೇಳುವಂತೆ ಕಸ್ತೂರ್‌ಬಾ ನಡೆದುಕೊಂಡದ್ದರ ಬಗ್ಗೆ ಬೇಸರವಾಯಿತು. 'ಆಯ್ತು. ಆಶ್ರಮದಲ್ಲಿ ಎಲ್ಲರೂ ಸಮಾನ. ನಾನು ವಿಚಾರಿಸ್ಕೊಳ್ತೀನಿ. ನೀವಿನ್ನು ಹೋಗ್‌ಬಹುದು' ಎಂದರು. ಅವರು ಹೋದಕೂಡಲೇ ಮಹದೇವ ದೇಸಾಯಿ ಕಡೆಗೆ ನೋಡಿದರು. ಆದೇಶ ಹೊರಡುತ್ತದೆಯೆಂದು ದೇಸಾಯಿ ನಿರೀಕ್ಷಿಸಿದರು. ಅವರು ಅಂದುಕೊಂಡಂತೆ ಗಾಂಧಿ ಸೂಚಿಸಿದರು:

'ಈಗ್ಲೇ ಕಸ್ತೂರ್‌ಗೆ ನಾನ್ ಹೇಳ್ದೆ ಅಂತ ಹೇಳಿ – ಕಾಫಿ ಕುಡೀಬಾರ್ದು.'

ಮಹದೇವ ದೇಸಾಯಿ ಸ್ವಲ್ಪ ಹಿಂದೆ ಮುಂದೆ ನೋಡಿದರು.

'ಅವತ್ತು ಸಿಹಿ ತಿನ್ನಬಾರದು ಅಂದ್ರಿ. ಇವತ್ತು ಕಾಫಿ ಕುಡ್ಯೋದ್ ಬೇಡ ಅಂತೀರಿ. ಇದೆಲ್ಲ ಸಣ್ಣ ವಿಷಯ.'

'ಇದು ಸಣ್ಣ ವಿಷಯ ಅಲ್ಲ ದೇಸಾಯಿ.'

'ಹಾಗಲ್ಲ ಬಾಪು, ಯಾರೋ ಏನೋ ಅದ್ಕಂಡ್ರು ಅಂತ, ಪಾಪ, ಕಸ್ತೂರ್‌ಬಾ ಅವ್ರಿಗೆ ಯಾಕ್ ಕಷ್ಟ ಕೊಡೋದು ಅಂತ...'

'ಸಾಕು ದೇಸಾಯಿ, ಯಾರೋ ಏನೋ ಅಂದ್ಕೊಳ್ಳೋದು ಕೂಡ ಆಶ್ರಮದ ಗೌರವಕ್ಕೆ ಧಕ್ಕೆ ತಂದಂತೆ. ನೀನ್ ಹೋಗಿ ಕಸ್ತೂರ್‌ಗೆ ಹೇಳ್ಬೇಕು.'

ಮಹದೇವ ದೇಸಾಯಿ ನಿಟ್ಟುಸಿರು ಬಿಟ್ಟರು. ಕ್ಷಣಕಾಲ ಸುಮ್ಮನಿದ್ದು ಎದ್ದು ನಿಂತರು. ಇಷ್ಟವಿಲ್ಲದ ಕಷ್ಟ ನಿರ್ವಹಿಸುವ ಕೆಲಸ.

'ಆಯ್ತು ಬಾಪು. ನೀವ್ ಹೇಳಿದ ಮೇಲೆ ನಾನ್ ಕೇಳಲೇಬೇಕು. ಲಕ್ಷ್ಮಣನ ಕೆಲ್ಸ ಮಾಡ್ತೀನಿ' ಎಂದರು ದೇಸಾಯಿ.

'ಲಕ್ಷ್ಮಣ?' – ಗಾಂಧಿಗೆ ತಕ್ಷಣ ಹೊಳೆಯದೆ ಕೇಳಿದರು.

'ಹೌದು ಬಾಪು, ರಾಮಾಯಣದ ಲಕ್ಷ್ಮಣ' ಎಂದು ಹೇಳಿ ಹೊರಟರು.

ಅವರಿಗೆ ಇದೆಲ್ಲ ಸಣ್ಣ ವಿಷಯ ಅನ್ನಿಸಿತ್ತು. ಗಾಂಧಿಗೆ ಹಾಗೆ ಅನ್ನಿಸಿರಲಿಲ್ಲ. ಆಶ್ರಮವಾಸಿಗಳು ಬಂದು ನ್ಯಾಯಾನ್ಯಾಯದ ಪ್ರಶ್ನೆ ಎತ್ತಿದ್ದು ಒಳಗೊಳಗೇ ಗಾಸಿ ಮಾಡಿತ್ತು. ಜೊತೆಗೆ ಕಸ್ತೂರ್‌ಬಾ ಕಾಫಿ ಕುಡಿದು ಆಶ್ರಮದ ನಿಯಮ ಉಲ್ಲಂಘಿಸಿದ್ದು ಸರಿಯಲ್ಲವೆಂಬ ಭಾವನೆ. ತಾವೇ ಮಾದರಿ ಹಾಕಬೇಕಾದ್ದು ಅಗತ್ಯ ಎಂಬ ಆದರ್ಶ. ಎಲ್ಲವೂ ಸೇರಿ 'ಸಣ್ಣವಿಷಯ' ಗಾಂಧಿಗೆ ದೊಡ್ಡದಾಗಿತ್ತು. ಗಾಂಧಿ ಸ್ವಭಾವ ಮಹದೇವ ದೇಸಾಯಿಗೂ ಗೊತ್ತಿತ್ತು. ಈ ವಿಷಯದಲ್ಲಿ ಚರ್ಚೆ ಮಾಡಿ ಪ್ರಯೋಜನವಾಗದೆಂದೇ 'ಲಕ್ಷ್ಮಣನ ಪಾತ್ರ'ದ ಪ್ರಸ್ತಾಪ ಮಾಡಿ ತೆರಳಿದ್ದು.

ಕಸ್ತೂರ್‌ಬಾ ಬಳಿಗೆ ಬಂದ ಮಹದೇವ ದೇಸಾಯಿ ತುಂಬಾ ಹಿಂಜರಿಕೆಯಿಂದಲೇ ವಿಷಯವನ್ನು ತಿಳಿಸಲು ಮುಂದಾದರು. 'ನಿಮಗೊಂದ್ ವಿಷ್ಯ ತಿಳಿಸ್‌ಬೇಕಿತ್ತು.'

'ಹೇಳಿ'– ಕಸ್ತೂರ್‌ಬಾ ಚುಟುಕಾಗಿ ಉತ್ತರಿಸಿ ಚರಕದಲ್ಲಿ ನೂಲು ತೆಗೆಯುವುದರಲ್ಲಿ ನಿರತರಾದರು. ಜೊತೆಯಲ್ಲಿದ್ದ ದುರ್ಗಾ, ದೇವದಾಸ್, ದೇಸಾಯಿ ಕಡೆಗೆ ನೋಡಿದರು.

'ನಾನೀಗ ಲಕ್ಷ್ಮಣನ್ ಪಾತ್ರ ನಿರ್ವಹಿಸಬೇಕಾಗಿದೆ.'

'ಲಕ್ಷ್ಮಣನ ಪಾತ್ರ? ಶ್ರೀರಾಮನ ತಮ್ಮ?'

'ಹೌದು. ರಾಮಾಯಣದಲ್ಲಿ ಬರ್‍ತಾನಲ್ಲ? ಆತನ ಪಾತ್ರ. ಆತನಿಗೆ ಒಂದು ಸಂದಿಗ್ಧ ಬಂತು.'

'ನಂಗಷ್ಟೆಲ್ಲ ವಿವರ ಗೊತ್ತಿಲ್ಲ. ಚಿಕ್ಕಂದಿನಲ್ಲಿ ಸೀತೆ ವಿಷ್ಯ ಅಷ್ಟಿಷ್ಟು ಕೇಳಿದ್ದೆ.'

'ರಾಮಾಯಣ ಕಾವ್ಯದಲ್ಲಿ ತುಂಬಾ ವಿವರಗಳಿವೆ...'

'ಅದ್ಸರಿ, ಲಕ್ಷ್ಮಣನ ಪಾತ್ರ ಮಾಡೋದು ಅಂದ್ರಲ್ಲ, ಆಶ್ರಮದಲ್ಲಿ 'ರಾಮಾಯಣ' ನಾಟ್ಕ ಏನಾದ್ರೂ ಆಡ್ತೀರ?'

'ಇಲ್ಲ ತಾಯಿ, ನಾಟ್ಕ ಆಡ್‌ದೇನೇ ಪಾತ್ರ ಮಾಡೋ ಕೆಲ್ಸ್ ನನಿಗ್ ಬಂದಿದೆ.'

ಕಸ್ತೂರ್‌ಬಾಗೆ ಅರ್ಥವಾಗಲಿಲ್ಲ. ಕುತೂಹಲದಿಂದ ನೋಡಿದರು.

'ಬಾಪು ನಿಮಗೊಂದ್ ಸಂದೇಶ ಕಳ್ಸಿದಾರೆ, ನನ್ ಮೂಲಕ.'

'ಸಂದೇಶ? ಏನು?'

'ನೀವು ಕಾಫಿ ಕುಡ್ಯೋದನ್ ಬಿಡಬೇಕು ಅಂತ ಬಾಪು ಸಂದೇಶ.'

'ಯಾಕೆ? ನಾನ್ ಕಾಫಿ ಕುಡ್ಯೋದ್ರಿಂದ ಯಾರಿಗೇನ್ ತೊಂದ್ರೆ?'

'ಆಶ್ರಮವಾಸಿಗಳ್ಯಾರೂ ಕಾಫಿ ಕುಡೀಬಾರ್ದು ಅಂತ ನಿಯಮ ಇದ್ಯಲ್ಲ ಅದಕ್ಕೆ...' ಎಂದು ಮಹದೇವ ದೇಸಾಯಿ ಮುಜುಗರದಿಂದಲೇ ಹೇಳಿದರು.

'ಅದಕ್ಕೆ? ಆಶ್ರಮವಾಸಿಗಳ್ಯಾರಾದ್ರು ದೂರು ಕೊಟ್ರ?'

ಕಸ್ತೂರ್ ಬೇಸರದಿಂದ ಕೇಳಿದರು.

'ದೂರು ಅಂತ ಅಲ್ಲ. ಬಾಪು ಅವರ ಗಮನಕ್ ತಂದ್ರು.'

ಕಸ್ತೂರ್‌ಬಾ ಒಂದು ಕ್ಷಣ ಯೋಚಿಸಿದರು.

'ಆಯ್ತು, ನ್ಯಾಯ ನೀತಿ ಎಲ್ರಿಗೂ ಒಂದೇ. ಇನ್ನೂ ಏನೇನ್ ಬಿಡ್‌ಬೇಕು ಅಂತ ಹೇಳಿದಾರೆ ನಿಮ್ ಬಾಪು?' ಕಸ್ತೂರ್‌ಬಾ ಕೆಣಕಿದರು.

ಮಹದೇವ ದೇಸಾಯಿ 'ಸದ್ಯಕ್ಕೆ ಇಷ್ಟೇ' ಎಂದು ಸುಮ್ಮನೆ ನಿಂತರು.

ಕಸ್ತೂರ್‌ಬಾ 'ಸರಿ' ಎಂದವರೇ ಎದ್ದರು; ಹೊರಟರು. ಮಹದೇವ ದೇಸಾಯಿ, ದುರ್ಗಾ, ದೇವದಾಸ್‌ಗೆ ಗಲಿಬಿಲಿಯಾಯಿತು. ಯಾಕೆಂದರೆ ಕಸ್ತೂರ್‌ಬಾ ಸ್ವಲ್ಪ ಸಿಟ್ಟಿನಿಂದಲೇ ಎದ್ದಿದ್ದರು. ಇವರು ಮೂವರೂ ಹಿಂಬಾಲಿಸಿದರು. ಕಸ್ತೂರ್‌ಬಾ ಸೀದಾ ಗಾಂಧಿಯಿದ್ದಲ್ಲಿಗೆ ಬಂದರು.

ಗಾಂಧಿಯ ಜೊತೆ ಮಗನ್‌ಲಾಲ್ ಇದ್ದ, ಒಂದು ನೋಟ್ ಬುಕ್ಕಿನಲ್ಲಿ ಬರೆದುಕೊಂಡಿದ್ದ ಆಶ್ರಮದ ಖರ್ಚಿನ ವಿವರಗಳನ್ನು ಒದಗಿಸುತ್ತಿದ್ದ.

ಕಸ್ತೂರ್‌ಬಾ ಬಂದವರೇ ಯಾವುದೇ ಪೀಠಿಕೆ ಹಾಕದೆ, 'ಬಾಪು, ನಾನು ರಾಮಾಯಣದ ಪೂರ್ತಿ ಕತೆ ಕೇಳ್‌ಬೇಕು. ಹೇಳಿ' ಎಂದರು, ಗಾಂಧಿಗೆ ಆಶ್ಚರ್ಯವಾಯಿತು.

'ಅರೆ! ಇದೇನು ಇದ್ದಕ್ಕಿದ್ದಂತೆ ಹೀಗ್ ಕೇಳ್ತಾ ಇದ್ದೀಯಲ್ಲ? ಕತೆ ಹೇಳುವಷ್ಟು ಪುರುಸೊತ್ತು ನನಗೆಲ್ಲಿದೆ?' ಎಂದು ಗಾಂಧಿ ಹೇಳಿದರೂ ಕಸ್ತೂರ್‌ಬಾ ಸುಮ್ಮನಾಗಲಿಲ್ಲ.

'ನೀವು ಶ್ರೀರಾಮನ್ ತರಾ ಆಡ್ತೀರಿ, ಮಹದೇವ ದೇಸಾಯೀನ ಲಕ್ಷ್ಮಣನ್ ಮಾಡ್ತೀರಿ. ನನಗೂ ಅದೆಲ್ಲ ವಿವರವಾಗಿ ಹೇಳಬೇಕಲ್ವ?'

'ನಾನು ಶ್ರೀರಾಮ ಅಂತ ಯಾವತ್ತೂ ಅಂದ್ಕೊಂಡಿಲ್ಲ. ಹಾಗೆಲ್ಲ ಅಂದ್ಕೊಳ್ಳೋದ್ ಎಲ್ಲಾದ್ರೂ ಉಂಟ ಕಸ್ತೂರ್? ಕೆಲವು ಸಾರಿ ಕೆಲವು ವಿಷಯಾನ ಮಹದೇವ ದೇಸಾಯಿ ಮೂಲಕ ಹೇಳಿ ಕಳಿಸ್ಬೇಕಾಗುತ್ತೆ. ಅರ್ಥಮಾಡ್ಕೊ.'

'ಅರ್ಥಮಾಡ್ಕೊಳ್ಳೋಕೆ ರಾಮಾಯಣದ